ಮರಕ್ಕೆ ಗುದ್ದಿ ಹೋಗ್ ಬಿಟ್ಟ. ಒಂದ್ ಹಳೆ ಮಾರುತಿ ಅವರಪ್ಪನ ಕಾರ್ ಅಂತೆ... '

'ಛೆ! ಹೌದಾ ಮಾರಾಯ....'

'ಅವ್ನ ಅಪ್ರಕಟಿತ ನಾಟಕದ ಹಸ್ತಪ್ರತಿ ಕಾರಲ್ಲೇ ಇತ್ತಂತೆ....'

'ಅಯ್ಯಯ್ಯೋ...!'

'ಹ್ದೂ'

'ಆಮೇಲೆ ಅದ್ಯಾರೋ ಪ್ರಕಟ ಬೇರೆ ಮಾಡಿದ್ರಂತೆ ಆ ನಾಟ್ಕನೂ... ಮತ್ತೆ ಎಷ್ಟೋ ಜನ ಹಳೆ ಸ್ಕೂಲ್ ಫ್ರೆಂಡ್ಸಿಗಳಿಗೆಲ್ಲ... ನಾನು ಸೌಮ್ಯ ಲವರ್ಸ್ ಆಗಿದ್ವಿ... ಅವ್ಳನ್ನೇ ಮದ್ವೆ ಆದೆ. ನಮಗೊಂದು ಹೆಣ್ಣು ಮಗು ಇದೆ...ಅಂತೆಲ್ಲ ರೀಲ್ ಬಿಡ್ತಾ ಇದ್ದನಂತೆ.... ಕೊನೆಗೆ ಅದು ಯು.ಎಸ್. ಅಲ್ಲಿರೋ ಸೌಮ್ಯನಿಗೆ ಗೊತ್ತಾಗಿ ಅವ್ಳು ಫೇಸ್ಬುಕಲ್ಲಿ ಸ್ಪಷ್ಟೀಕರಣ ಬೇರೆ ಕೊಟ್ಟಿದ್ದಾಳೆ.... ನೋಡಿದ್ರೆ ಅವ್ನು ಇದ್ದದ್ದು ರಿಟೈರ್ಡ್ ಆದ ಅವ್ರಪ್ಪ ಮತ್ತು ಹಾಗೇ ಕಾಲು ಮುರಿದುಕೊಂಡಿದ್ದ ಅವನ ಅಮ್ಮನ ಜತೆ....'

'ಏನ್ ಮಾರಾಯ ಕಾಮು ಸ್ಥಿತಿ ಇಷ್ಟ ದಾರುಣ...'

'ಎಲ್ಲ ಎನರ್ಜಿ ದಿಕ್ಕಾಪಾಲಾಗಿ ಎತ್ತತ್ತಗೋ ಹರಿದ್ರೆ....' ಅಂತ ಮ್ಯಾಕ್ಸ್ ಇನ್ನೆರೆಡು ಪೆಗ್ಗು ಸುರಿದು ಆ ಕೇರ್‌ಟೇಕರ್ ನಂಬರ್ ಅದುಮಿ ಮತ್ತೆ ಕಾಲ್ ಕನೆಕ್ಟ್ ಆಗದೇ ಗೊಣಗಿ...' ಆಮ್ಲೇಟ್ ಭಾಗ್ಯ ಇಲ್ಲ ಅನ್ಸುತ್ತೆ ಥೂ...' ಎಂದು ಇನ್ನೆರೆಡು ಗುಟುಕು ಕುಡಿದ.

'ಮೊಟ್ಟೆ ಇದ್ರೆ ನಾವೇ ಟ್ರೈ ಮಾಡ್ಬಹುದಲ್ಲ...'

'ಎಲ್ಲ ಬೀಗ .... ಫ್ರಿಡ್ಜ್ ಬೀಗ... ಬಾರ್ ರೂಮ್ ಬೀಗ... ಮಾಸ್ಟರ್ ಬೆಡ್ ರೂಮ್ ಬೀಗ...' ಎಂದು ಏನಾದ್ರೂ ಮುರುಕು ಸಿಗುತ್ತಾ ಎಂದು ನೋಡಲು ಒಳಗೆ ಎದ್ದು ಹೋದ.

ವಿಕಾಸ ಒಮ್ಮೆ ತೇಗಿ, ಮತ್ತೊಮ್ಮೆ ಐಸ್ ಪ್ಯಾಕ್ ಇಡಲು ತಡಕಾಡಿದ. ಮಂಜುಗೆಡ್ಡೆ ಸಂಪೂರ್ಣವಾಗಿ ಕರಗಿ ಚೀಲದೊಳಗೆ ನೀರು ತುಳುಕಾಡುತಿತ್ತು. ಇವನ ಚಡ್ಡಿಯೂ ಒದ್ದೆ ಆಗಿತ್ತು.

ಹೊತ್ತೇರಿತ್ತು. ಹೆಚ್ಚು ಕಮ್ಮಿ ಒಂದು ನಲವತ್ತು. ಹಬೆಯಾಡುತ್ತಿದ್ದ ಆಕಾಶವನ್ನು ಸಮುದ್ರ ಪ್ರತಿಫಲಿಸುತಿತ್ತು. ಸುಡುವ ಕಡಲು, ಸುಡುವ ಗಗನ, ಸುಡುವ ಮರಳು. ಸುಡುವ ಗಾಳಿ... ಈ ಎಲ್ಲ ಮೂಲಭೂತ ತತ್ವಗಳು ಒಂದರೊಳಗೆ ಐಕ್ಯವಾಗಿ ಕಾಯುತ್ತಲೇ ಇದ್ದವು.

'ಸೇಬು ಇಟ್ಟಿದ್ದಾರೆ ಕಣೋ ಅಷ್ಟೇ.... ಇಷ್ಟರಲ್ಲೇ ಅಡ್ಜಸ್ಟ್ ಮಾಡ್ಕೋಬೇಕು ಅವ್ನು ಬರೋ ತನ್ಕ....' ಎಂದು ಒಣಗಿದ್ದ ಸೇಬೊಂದನ್ನು ವಿಕಾಸನತ್ತ ಎಸೆದು ಮತ್ತೆ ಕುರ್ಚಿಯಲ್ಲಿ ಕುಕ್ಕರಿಸಿ ಮತ್ತೆ ದಿಗಂತವನ್ನು ಬರೀ ಕಣ್ಣಲ್ಲಿ ದಿಟ್ಟಿಸಿ 'ಏನ್ ಬೇಯ್ತಾ ಇದೆ ಮಾರಾಯ... ಥೂ...' ಎಂದು ಕೈಯಲ್ಲಿ ಮುಖ ಮುಚ್ಚಿ ಕಣ್ಣು ಮತ್ತು ಹಣೆಯನ್ನು ನೀವಿಕೊಂಡ.

'ಸುಷ್ಮಾ ಸಿಕ್ಕಿದ್ಲು ಕಣೋ ಮೊನ್ನೆ ಬೆಂಗ್ಳೂರಿಗೆ ಹೋದಾಗ... ತುಂಬಾ ಹೊತ್ತು ಮಾತ್ ಆಡಿದ್ಲು...'

'ಹೌದಾ ಅವ್ಳಿನ್ನು ಟಚ್ಚಲ್ಲಿ ಇದ್ದಾಳ ನಿನ್ನ್ ಜತೆ...? ಎಸ್.ಎಸ್.ಎಲ್.ಸಿಯಲ್ಲಿ ಆ ಕಾಲದಲ್ಲೇ ಔಟ್ ಆಫ್ ಔಟ್ ತೆಗೆದಿದ್ಲು ಅಲ್ವಾ... ನಾವೆಲ್ಲ ಇಂಗ್ಲಿಷ್ ಎಗ್ಸಾಮಲ್ಲಿ ಪಾಸ್ ಆಗ್ತಾ ಇದ್ದದ್ದೇ ಅವ್ಳ ದಯೆಯಿಂದ...'

'ಅದೇ... ಟಚ್ಚಲ್ಲೇನೂ ಇಲ್ಲ... ನನ್ನ ಹತ್ರ ಗಾಂಜಾ ಜಾಯಿಂಟುಗಳು ಇರುತ್ತಲ್ಲ... ಬೆಂಗ್ಳೂರಿಗೆ ಹೋಗ್ವಾಗ ಒಂದೊಂದ್ ಸಲ ಅವ್ಳಿಗೆ ಬೇಕಾದ್ರೆ ಅಂತ...'

'ಅಲ್ವೋ ಬೆಂಗ್ಳೂರವ್ಳಿಗೆ ನೀನ್ ಗಾಂಜಾ ಸಪ್ಲೈ ಮಾಡ್ತ್ಯಾ...'

'ನನ್ನ ಪೆಡ್ಲರ್ ಮಾಡ್ಬೇಡ ಗುರುವೇ! ಅವ್ಳ್ ಒಳ್ಳೆ ಹುಡ್ಗಿ ಪಾಪ ಹಂಗೆಲ್ಲ ರಿಸ್ಕ್ ತಗೊಳಲ್ಲ ಬೇರೆ ಜನ್ರ ಜತೆ... ನಾನ್ ಹಳೇ ಫ್ರೆಂಡ್ ಅಂತ ಒಂದ್ ನಂಬ್ಕೆ...'

'ಏನ್ ಕಥೆ ಅವ್ಳದ್ದು...'

ಅಪ್ಪ- ಅಮ್ಮನ ಜತೆನೇ ಇದ್ದಾಳೆ ಇನ್ನೂ ಅವ್ಳು... ರೀಸೆಂಟಾಗಿ ಹೊಸ ಫ್ಲಾಟ್ ಪರ್ಚೇಸ್ ಮಾಡಿದ್ಲಂತೆ... ಅದ್ಯಾವುದೋ ಫ್ಯಾನ್ಸಿ ಕೋಡೋ ...ಅಲ್ಗೋರಿದಮ್ಮೋ ಏನೋ ಯಾರೋ ಕ್ಲೈಂಟಿಗೆ, ಬ್ಯಾಂಕಿಗೆ ಸೆಕ್ಟರ್ರಲ್ಲಿ ಫ್ರಾಡ್ ಡಿಟೆಕ್ಷನ್ನಿಗೆ ಅಂತಾ ಇವ್ಳೇ ಇನ್ವೆಂಟ್ ಮಾಡೀ ಡೆವಲಪ್ಪ್ ಮಾಡಿದಾಳೆ, ಮತ್ತೆ ನೋಡಿದ್ರೆ ಅವ್ಳ ಇನ್‌ವೆನ್ಷನ್ನಿಗೆ ಆ ಕಂಪೆನಿಯವ್ರು ತಮ್ಮದೇ ಕ್ರಿಯೇಶನ್ ಇದು ಅಂತ ಪೇಟೆಂಟ್ ಹಾಕ್ ಬಿಟ್ಟಿದ್ದಾರೆ... ಅದನ್ನ ಹೇಳೀ ನಗ್ತಾ ಇದ್ಲು! 'ಏನಪ್ಪಾ ಬರೀ ಟೀಮ್ ವರ್ಕ್... ಟೀಮ್ ಸ್ಪಿರಿಟ್... ಕಲೆಕ್ಟಿವ್ ಹ್ಯಾಪಿನೆಸ್ ಇದೇ ಇವ್ರ ಮೋಟೋ... ಇಂಡಿವಿಶಿಯಲ್ಲ್ ಆಗಿ ಇನ್ವೆಂಟ್ ಮಾಡಿದ್ರೆ ತಲೆ ಮೇಲೆ ಬಡಿದ್ದ್ ಕೂರ್ಸಿ ಕ್ರೆಡಿಟ್ ಕಾಸು ಎಲ್ಲ ಅವೇ ತಗೋತಾರೆ' ಅಂತಿದ್ಲು...'

'ಮತ್ತೆ ಯಾಕೆ ಅಲ್ಲೇ ಇದ್ದಾಳೆ... ಬಿಟ್ಟ್ ಹೋಗೋದ್